ಮಾತ್ನ ಇಂದು ಕಕ್ಕೇ ಬಿಟ್ಟ. ಈ ಮಾತ ಕೇಳಿ ಮಂಜೇಗೌಡರ ಎದೆ ಬೆಚ್ಚಗಾದಂತಾಗಿ, 'ಲೇ ಕರ್ಯ ಏನ್ಲ ನಿಮ್ಮುಡ್ಗ ಆಡ ಮಾತು, ನಿಮ್ಗೆ ಏನು ಧರ್ಮ ಕರ್ಮ ಅನ್ನದೆ ಇಲ್ವೇನ್ರಲ, ಥೂ ನಿಮ್ಮ ಜನ್ಮಕ್ಕೆ ಒಷ್ಟು ಬೆಂಕಿ ಹಾಕ, ಹಿಂಗೆ ಅನ್ಯಾಯಕ್ಕೆ ಬಂದ್ರೆ ಆ ನಮ್ಮವ್ವ ಸುಂಕಿ ಮಾರಮ್ನೆ ನೋಡ್ಕೆಂತಳೆ ನಿಮ್ಮುನ್ನೆಲ್ಲವ' ಎಂದು ವೊಲ್ಲಿ ಕೊಡವುತ್ತ ಮೇಲೆದ್ದರು. ಪಟೇಲ್ರ ಪರಮೇಶಪ್ಪ, 'ನಿಮ್ಗೇನಾರ ಧರ್ಮ ಕರ್ಮ ಅನ್ನದು ಐತೇನ್ರೊ, ನಾಲಿಗೆ ಐತೆ ಅಂತ ಹೆಂಗೆ ಬೇಕು ಅಂಗೆ ತಿರುಗುಸ್ತಿರ' ಎಂದು ದನಿ ಅದುರಿಸುತ್ತ ಎದ್ದರು. ಇಬ್ಬರಿಗೂ ಹಟ್ಟಿ ರೊಂಡಿ ಎತ್ತಿರುವ ಚೋಳಿನಂತೆ ಕಂಡುಬಂದುದರಿಂದ ದಡಿ ದಡಿನೆ ಊರೊಳ್ಳ ಕಡಿಕೆ ಕಾಲಾಕತೊಡಗಿದರು.

ಪ್ರಶಾಂತನಿಗೆ ಇವತ್ತ ಮಂಜೇಗೌಡರಿಗೆ ಸರ್ಯಗೆ ಅಂದು ಕಳುಹಿಸಿವು, ಇನ್ನೆಂದೂ ಹಟ್ಟಿಕಡಿಕೆ ತಲೆ ಹಾಕಿ ಮಲಗಲ್ಲ ಅನ್ಸಿರೆ, ಅದೇ ಮಂಜೇಗೌಡರಿಗೆ ಕರ್ಯನ ಮಗ ಸೂರಿ ಅಂದ ಮಾತಿನ ಜೊತೆಗೆ ಅಪ್ಪ ಪಂಚೇಗೌಡರು ಕೊಟ್ಟಿದ್ದ, ಈಗ ಫಲಕೊಡುತ್ತಿರುವ ಮುನ್ನೂರು ಗಿಡ ತೆಂಗಿನ ಸೊಸಿಗಳು, ಎರಡೆರಡು ಬೋರು, ಪೈಪ್ ತುಂಬ ನೀರು ಎಲ್ಲವನ್ನೂ ಯಾರೋ ಹೊತ್ತೊಯ್ದಂತೆ ಭಾಸವಾಗಿ ನಿದ್ರೆ ಬರದಾಯಿತು. ಮೆಟ್ಟು ಮಾಡ ಚಲುವನ ಎರಡೆಕ್ರೆ ಜಮೀನ್ನ ಮುನ್ನೂರು ರುಪಾಯಿಗೆ ಬರೆಸ್ಕೆಂಡಿದ್ದ ಪಟೇಲ್ರು ಪರಮೇಶಪ್ಪ ಈಗ ಅಲ್ಲಿ ನೂರೈವತ್ತು ಗಿಡ ತೆಂಗಿನ ಸಸಿ ನೆಟ್ಟು ಫಲ ಕಾಣುತ್ತಿದ್ದರು. ಫಲ ತಿಂತ್ತಿದ್ರೇನಂತೆ ಅದರ ಪಾಣಿ ಮಾತ್ರ ರಂಗನ ಅಜ್ಜ ತಿಮ್ಮಜ್ಜನ ಹೆಸರಿನಲ್ಲೇ ಬರುತ್ತಿದ್ದು, ಸೇವಾಕೇಂದ್ರದ ರಂಗನೂ ಏನಾರ ಸೇರಿ ಈ ರೀತಿ ಚಿತಾವಣೆ ನಡೆಸೆವ್ರ ಎಂದು ಆತಂಕಕ್ಕೆ ಬಿದ್ದು, ಇಬ್ಬರೂ ಸೇರಿ ಈ ಲೌಡಿ ಮಕ್ಳಿಗೆ ಹೆಂಗೆ ಬುದ್ಧಿ ಕಲಿಸದು ಎಂದು ತರಾವರಿಯಾಗಿ ಯೋಚಿಸತೊಡಗಿದರು.

ಅಂತಿಮವಾಗಿ ಈ ನನ್ಮಕ್ಳುಜೊತೆ ಈಗ ದ್ವೇಷ ಕಟ್ಕೆಣದು ಬ್ಯಾಡ, ಏನಾರ ಮಾಡಿ ಒಳಿಕಾಕ್ಯಂಡು ಕೆಲ್ಸ ಸಾಧಿಸ್ಕಂಬೇಕು ಅನಿಸಿ, ಈ ಶೂನ್ಯಾವಸ್ಥೆಯಲ್ಲೇ ಅವರಿಗೆ ತಮ್ಮ ಮಠದ ಸ್ವಾಮಿಗಳು ನೆನಪಾದುದು. ಮಠದ ಸ್ವಾಮಿಗಳು ಈಗ ಚಾಲ್ತಿಯಲ್ಲಿರುವ ಬಹು ಬೇಡಿಕೆಯ ಸ್ವಾಮಿಗಳು. ಅವರು ಕೈಗೊಂಡಿದ್ದ 'ಸ್ವಾಮೀಜಿಯ ನಡಿಗೆ ದಲಿತ ಕೇರಿಯ ಕಡೆಗೆ' ಕಾರ್ಯಕ್ರಮ ರಾಜ್ಯದಾದ್ಯಂತ ಸಂಚಲನ ಉಂಟುಮಾಡಿತ್ತು. ಪರ ವಿರೋಧದ ಚರ್ಚೆಗಳು ನಡೆಯುತ್ತಿದ್ದರೂ ಇದಾವುದಕ್ಕೂ ಸ್ವಾಮಿಗಳು ತಲೆಕೆಡಿಸಿಕೊಳ್ಳದೆ ಕೆಲ ದಲಿತ ಕೇರಿಗಳನ್ನು

